ವಿದ್ಯಾವಂತರನ್ನಾಗಿ ಮಾಡಿದರೆ ಅವರಿಗೆ ಎಲ್ಲ ವೈಭೋಗಗಳನ್ನು ಕೊಡುತ್ತೇನೆ" ಎಂದ ರಾಜ. ಮಂತ್ರಿಗೆ ಒಬ್ಬ ಗುರುವಿನ ಪರಿಚಯವಿತ್ತು. ಅವನು ಎಂತಹ ದಡ್ಡನಿಗೂ ವಿದ್ಯೆ ಕಲಿಸುವಂತಹ ಚಾಣಾಕ್ಷ ಗುರುವಾಗಿದ್ದ. ಅವನ ಹೆಸರು ಬಸವರಾಯಪ್ಪ. ರಾಜನ ಅನುಮತಿ ಪಡೆದು ಬಸವರಾಯಪ್ಪನನ್ನು ಅರಮನೆಗೆ ಕರೆತರಲಾಯಿತು.

ಪಂಡಿತ ಬಸವರಾಯಪ್ಪನು ರಾಜನಿಗೆ ಎರಡು ಶರತ್ತು ಹಾಕಿದ. "ಒಂದು ನಾನು ನಿಮ್ಮ ಕುಮಾರರನ್ನು ಸಕಲ ವಿದ್ಯಾಪಾರಂಗತರನ್ನಾಗಿ ಮಾಡಿದರೆ ನನಗೆ ಅರ್ಧ ರಾಜ್ಯ ಕೊಡಬೇಕು. ಎರಡು, ನಾನು ಸಕಲ ವಿದ್ಯೆಗಳನ್ನು ಕಲಿಸುತ್ತೇನೆ. ಕಲಿಸಿದ ಬಳಿಕ ಕೊನೆಯ ದಿನ ಪರೀಕ್ಷೆ ನಡೆಸುತ್ತೇನೆ. ರಾಜಕುಮಾರರು ಪರೀಕ್ಷೆಯಲ್ಲಿ ಸೋತರೆ ಕ್ಷಣದಲ್ಲಿ ನಿಮ್ಮ ಅಪ್ಪಣೆಯನ್ನು ಸಹ ಪಡೆಯದೇ ನಾನು ನಿಮ್ಮ ಕುಮಾರರ ಶಿರಚ್ಛೇದನ ಮಾಡುತ್ತೇನೆ. ಒಂದು ವೇಳೆ ನಾನು ಸೋತರೆ, ಕ್ಷಣದಲ್ಲಿ ನನ್ನ ತಲೆಯನ್ನು ಕತ್ತರಿಸಬೇಕು. ಈ ಶರತ್ತಿಗೆ ಒಪ್ಪಿಗೆ ಇದ್ದರೆ ಹೇಳಿ" ಎಂದ ಬಸವರಾಯಪ್ಪ.

ಬೆಚ್ಚಿದ ರಾಜ ಸುಮಿತವರ್ಮನು ಮಕ್ಕಳ ಭವಿಷ್ಯ ಮತ್ತು ಹಿತಕ್ಕಾಗಿ ಕ್ಷಣ ಕಾಲ ಮಕ್ಕಳ ಮುಖ ನೋಡಿ ಶರತ್ತಿಗೆ ಒಪ್ಪಿದ. ರಾಜಕುಮಾರರಾದ ಸಾಳವರ್ಮ, ಸೂತ್ರವರ್ಮರ ಅಭ್ಯಾಸ ನಿರಂತರವಾಗಿ ನಡೆಯುತ್ತಿತ್ತು. ತಿಂಗಳು ವರ್ಷಗಳೇ ಗತಿಸಿದವು. ಒಂದು ದಿನ ಪಂಡಿತ ಬಸವರಾಯಪ್ಪನು ರಾಜನಿಗೆ ಹೇಳಿ ಕಳುಹಿಸಿದ. ಬರುವ ಅಮಾವಾಸ್ಯೆಯಂದು ರಾಜಕುಮಾರರ ಪರೀಕ್ಷೆ ಇದೆ, ಅದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು ಎಂದು. ಅರಮನೆಯ ಆವರಣದಲ್ಲಿ ಎಲ್ಲ ಸಿದ್ಧತೆ ಆಯಿತು. ದೇಶದ ಮೂಲೆ ಮೂಲೆಗಳಿಂದ ಜನ ಸೇರಿದರು. ಬೇರೆ ರಾಜ್ಯಗಳಿಂದ ರಾಜಕುಮಾರರು ಬಂದು ಸೇರಿದರು.

ಅಂತಿಮ ಪರೀಕ್ಷೆ ಹೇಗೆ ಆಗುತ್ತದೆ, ಯಾವ ರಾಜಕುಮಾರ ಸೋಲುತ್ತಾನೆ, ಯಾವ ರಾಜಕುಮಾರನ ಶಿರಚ್ಛೇದನವಾಗುತ್ತದೆಯೋ? ಅಥವಾ ಪಂಡಿತರ ಶಿರಚ್ಛೇದನವಾಗುತ್ತದೆಯೋ? ಅಥವಾ ಪಂಡಿತರಿಗೆ ಅರ್ಧ ರಾಜ್ಯ ಕೊಡುತ್ತಾರೋ... ಇಂತಹ ಹಲವಾರು ಪ್ರಶ್ನೆಗಳು ಎಲ್ಲರ ಮನಸ್ಸಿನಲ್ಲಿ ಮೂಡಿ ಎಲ್ಲ ಕಡೆ ಚರ್ಚೆಗೆ ಕಾರಣವಾಯಿತು.

ರಾಜಕುಮಾರರು ಪರೀಕ್ಷೆ ನಡೆಯುವ ನಿಗದಿತ ಸ್ಥಳಕ್ಕೆ ಪ್ರವೇಶಿಸಿ ಮೊದಲು ತಂದೆಗೆ ಮತ್ತು ಗುರುವಿಗೆ ನಮಸ್ಕರಿಸಿದರು. ಸ್ಪರ್ಧೆ ನಡೆಯತೊಡಗಿತು. ಗುರುಗಳು ಕೇಳಿದ ಪ್ರತಿಯೊಂದು ಪ್ರಶ್ನೆಗೆ ಇಬ್ಬರೂ ಸರಿಯಾಗಿ ಉತ್ತರಿಸತೊಡಗಿದರು. ಜನರು ಚಪ್ಪಾಳೆ ತಟ್ಟಿದರು. ಪ್ರಶ್ನೆಗಳ ಮೇಲೆ ಪ್ರಶ್ನೆ ಬರತೊಡಗಿದವು. ಯಾವ ರಾಜಕುಮಾರನೂ ಸೋಲುವ ಸೂಚನೆ ಸಿಗಲಿಲ್ಲ. ರಾಜ ಸುಮಿತವರ್ಮನಿಗೆ ಚಿಂತೆಯಾಯಿತು. ಕೊನೆಗೆ ಅಂತಿಮ ಪರೀಕ್ಷೆ ಕತ್ತಿ ವರಸೆ ಪ್ರಾರಂಭವಾಯಿತು. ತೀವ್ರವಾದ ಹೋರಾಟವೇ ನಡೆಯಿತು. ಅಣ್ಣ ತಮ್ಮ ಎನ್ನುವುದನ್ನು ಮರೆತು ಜಯಗಳಿಸಲು ಹೋರಾಡುತ್ತಿದ್ದರು. ಕೊನೆಗೆ ಯಾರೂ ಸೋಲಲಿಲ್ಲ. ನಿರಾಶೆಯಿಂದ ನಿತ್ರಾಣರಾಗಿ ಬಿದ್ದು ಬಿಟ್ಟರು. ರಾಜ ಸುಮಿತವರ್ಮನು ಪಂಡಿತ ಬಸವರಾಯಪ್ಪನ ಬಳಿ ಮಾತನಾಡಿದ. ಇಬ್ಬರಲ್ಲಿ ಯಾರೂ ಸೋಲುತ್ತಿಲ್ಲ. ಯಾರ ಶಿರಚ್ಛೇದನವನ್ನು ನೀವು ಮಾಡುತ್ತೀರಿ ಎಂದು ಕೇಳಿದ.

"ಮಹಾರಾಜಾ, ನಾನು ಅಂದು ಸೋತವರಿಗೆ ಶಿರಚ್ಛೇದನ ಮಾಡುತ್ತೇನೆ ಎಂಬ ಶರತ್ತನ್ನು ವಿಧಿಸಿದ್ದರಿಂದಲೇ ಶತದಡ್ಡರಾದ ರಾಜಕುಮಾರರನ್ನು ಜಾಣರು, ಶೂರರನ್ನಾಗಿ ಮಾಡಲು ಸಾಧ್ಯವಾಯಿತು. ಯಾರೂ ಜೀವ ಭಯ ಬಿಟ್ಟು ಗುರಿಯ ಕಡೆ ಲಕ್ಷ್ಯ ವಹಿಸಿ ಮುನ್ನುಗ್ಗುತ್ತಾರೋ ಅವರೇ ಜಯಶಾಲಿಗಳು. ಈ ನಿಮ್ಮ ಇಬ್ಬರೂ ರಾಜಕುಮಾರರು ಶೂರರೂ ಹೌದು, ಜಯಶಾಲಿಗಳೂ ಹೌದು" ಎಂದ ಪಂಡಿತ ಗುರು ಬಸವರಾಜಪ್ಪ. ರಾಜನು ಬಸವರಾಜಪ್ಪನವರ ದೂರದೃಷ್ಟಿಯನ್ನು ಅರಿತು ಸಕಲ ಗೌರವ ಆದರಗಳಿಂದ ಸತ್ಕರಿಸಿ ರಾಜಗುರುವನ್ನಾಗಿ ನೇಮಿಸಿದನು.

(ಸಂಗ್ರಹ)